I/414656/2023

**ಕರ್ನಾಟಕ ಸರ್ಕಾರ**
**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರ ಕಚೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru-03
Telephone: 080 23367123
Email:apccfpr@gmail.com

ಸಂಖ್ಯೆ: KFD/HOFF/A2(EST)/40/2021-PnR-KFD **E- 485960**
ದಿನಾಂಕ: 06-04-2023.

## ಅಧಿಕೃತ ಜ್ಞಾಪನಾ

**ವಿಷಯ :** ದಿನಾಂಕ:01-01-2020 ರಿಂದ 09-12-2021ರವರೆಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ (Manager)' ವೃಂದದ ರಾಜ್ಯಮಟ್ಟದ ಅಂತಿಮ ಜ್ಯೇಷ್ಠತ ಪಟ್ಟಿ (Final Seniority List) ಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ :**
1. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957 ರ ನಿಯಮ 10.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 106 ಸೇನನಿ 2021, ದಿನಾಂಕ:10.12.2021.
3. ಈ ಕಚೇರಿ ಅಧಿಕೃತ ಜ್ಞಾಪನಾ ಪತ್ರ ಸಮ ಸಂಖ್ಯೆ ದಿನಾಂಕ:29.12.2022.

**ಪ್ರಸ್ತಾವನೆ:-**

ಉಲ್ಲೇಖ (1)ರಂತೆ ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ಪ್ರತಿಯೊಂದು ಸಾಲಿನಲ್ಲಿ ಪ್ರತಿಯೊಂದು ವೃಂದದಲ್ಲಿನ ಅಧಿಕಾರಿ/ಸಿಬ್ಬಂದಿಗಳ ಜ್ಯೇಷ್ಠತಾ ಪಟ್ಟಿ(Seniority List)ಯನ್ನು ತಯಾರಿಸುವುದು ಕಡ್ಡಾಯವಾಗಿರುತ್ತದೆ.

ಈ ಮಧ್ಯೆ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 106 ಸೇನನಿ 2021 ದಿನಾಂಕ:10.12.2021ರಲ್ಲಿ *"ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಅನುಪಾತ/ಪ್ರತಿಶತ ಪ್ರಮಾಣವನ್ನು ನಿಗದಿಪಡಿಸಿದ್ದಲ್ಲಿ, ನಿಗದಿಪಡಿಸಿದ ಅನುಪಾತ/ಪ್ರತಿಶತದನ್ವಯ ಹುದ್ದೆ ಆದಾರಿತವಾಗಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗಳಿಗೆ ಒಟ್ಟು ಹುದ್ದೆಗಳನ್ನು ವರ್ಗೀಕರಣ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಆ ವೃಂದದಲ್ಲಿನ ಶಾಶ್ವತ ಹುದ್ದೆಗಳ ಜೊತೆಗೆ ತಾತ್ಕಾಲಿಕ ಹುದ್ದೆಗಳು ಸಹ ಒಳಗೊಂಡಿರುತ್ತವೆ. ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ಮೇಲ್ಕಂಡಂತೆ ವರ್ಗೀಕರಿಸಿದ ನಂತರ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಭರ್ತಿ ಮಾಡತಕ್ಕದ್ದು"* ಎಂದು ತಿಳಿಸಲಾಗಿದೆ. ಮುಂದುವರೆದು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:DPAR 48 SSR 75 ದಿನಾಂಕ: 05.07.1976ರಲ್ಲಿ ಬ್ಲಾಕ್ ಅವಧಿಯನ್ನು ವಿಂಗಡಿಸುವ ಕುರಿತು ಮಾರ್ಗಸೂಚಿಗಳನ್ನು ನಿಗದಿಪಡಿಸಿದ್ದು, ಈ ಅಧಿಕೃತ ಜ್ಞಾಪನದ ಕಂಡಿಕೆ 3 (c) ರಂತೆ ನೇರ ನೇಮಕಾತಿ ಮತ್ತು ಬಡ್ತಿಯ ನಡುವೆ ಅನುಪಾತವು **ದಿನಾಂಕ:10.12.2021ರ ಆದೇಶದಂತೆ ಬದಲಾವಣೆಗೊಂಡಿದ್ದರಿಂದ** ದಿನಾಂಕ:01.01.2020ರಿಂದ ಆರಂಭವಾಗುವ ಬ್ಲಾಕ್ ಅವಧಿಯನ್ನು ದಿನಾಂಕ:09.12.2021ಕ್ಕೆ ಮುಕ್ತಾಯಗೊಳಿಸಬೇಕಾಗಿರುತ್ತದೆ.

ಅದರನ್ವಯ, ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು

I/414656/2023

ಅಧಿನಿಯಮ 2017ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018 ದಿನಾಂಕ:27.02.2019 ಮತ್ತು 15.05.2019ರ ಮಾರ್ಗಸೂಚಿಗಳನ್ವಯ ದಿನಾಂಕ:01.01.2020ರಿಂದ ಆರಂಭವಾಗುವ ಬ್ಲಾಕ್ ಅವಧಿಯನ್ನು ದಿನಾಂಕ:09.12.2021ರವರೆಗಿನ ಅವಧಿಯಲ್ಲಿ ವ್ಯವಸ್ಥಾಪಕ ವೃಂದದಿಂದ ಆಡಳಿತ ಸಹಾಯಕ ವೃಂದಕ್ಕೆ ಬಡ್ತಿ ಹೊಂದಿದ ಅಧಿಕಾರಿಗಳನ್ನು ಒಳಗೊಂಡಂತೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ (Manager)' ರಾಜ್ಯ ಮಟ್ಟದ ಕರಡು ಜ್ಯೇಷ್ಠತಾ ಪಟ್ಟಿಯನ್ನು (Draft Seniority List) ಉಲ್ಲೇಖ (3)ರ ಈ ಕಚೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಅದರಂತೆ ಸದರಿ ಕರಡು ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿರುವ ಅಂಶಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಿ, ಕ್ರೋಡೀಕರಿಸಿ ಆಕ್ಷೇಪಣೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಕುರಿತು ಈ ಕೆಳಕಂಡಂತೆ ವಿವರಿಸಲಾಗಿದೆ.

| **ಕ್ರ. ಸಂ.** | **ಆಕ್ಷೇಪಣೆ ಸಲ್ಲಿಸಿದ ನೌಕರರ ಹೆಸರು ಮತ್ತು ಪದನಾಮ** | **ಸಲ್ಲಿಸಿರುವ ಆಕ್ಷೇಪಣೆ ವಿವರ ಮತ್ತು ದಿನಾಂಕ** | **ಆಕ್ಷೇಪಣೆಗೆ ತೆಗೆದುಕೊಂಡ ಕ್ರಮ** |
|---|---|---|---|
| 1 | 2 | 3 | 4 |
| 1 | ಶ್ರೀ ಸುರೇಂದ್ರ ಸ್ವಾಮಿ, ವ್ಯವಸ್ಥಾಪಕರು | ಸದರಿ ಅಧಿಕಾರಿಗಳು ತಮ್ಮ ಕಚೇರಿ ಅಧಿಸೂಚನೆ ಸಂಖ್ಯೆ: KFD/HOFF/A2/EST/06/2020, ದಿನಾಂಕ:20.07.2021ರಲ್ಲಿ ಅಧೀಕ್ಷಕರ ಹುದ್ದೆಯಿಂದ ವ್ಯವಸ್ಥಾಪಕರ ಹುದ್ದೆಗೆ ಬಡ್ತಿ ನೀಡಿದ್ದು, ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ ಮತ್ತು ಅರ್ಹತಾ ದಿನಾಂಕ ವನ್ನು 31.07.2021 ಎಂದು ಕರಡು ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದ್ದು, ಮೇಲಿನ ಅಧಿಸೂಚನೆಯ ದಿನಾಂಕ:20.07.2021 ಎಂದು ತಿದ್ದುಪಡಿ ಮಾಡಲು ಕೋರಿರುತ್ತಾರೆ. | ಈ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: KFD/HOFF/A2/EST/06/2020, ದಿನಾಂಕ:20.07.2021ರಲ್ಲಿ ಒಟ್ಟು 05 ಅಧೀಕ್ಷಕರನ್ನು (ಶ್ರೀ ಸುರೇಂದ್ರ ಸ್ವಾಮಿ ರವರನ್ನು ಸೇರಿದಂತೆ) ವ್ಯವಸ್ಥಾಪಕರ ಹುದ್ದೆಗೆ ಮುಂಬಡ್ತಿ ನೀಡಿ ಆದೇಶಿಸಿದ್ದು, ಅದರಂತೆ ಶ್ರೀ ಸುರೇಂದ್ರ ಸ್ವಾಮಿ ಇವರು ವ್ಯವಸ್ಥಾಪಕರ ಹುದ್ದೆಗೆ ದಿನಾಂಕ:31.07.2021ರಂದು ಕಾರ್ಯವರದಿ ಮಾಡಿಕೊಂಡಿರುವುದರಿಂದ, ವ್ಯವಸ್ಥಾಪಕರ ವೃಂದದಲ್ಲಿ ಸದರಿಯವರ ಕಾರ್ಯವರದಿ ದಿನಾಂಕವನ್ನು ನಿಯಮಾನುಸಾರ ಅರ್ಹತಾ ದಿನಾಂಕವಾಗಿ ಪರಿಗಣಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಈ ಆಕ್ಷೇಪಣೆಯು ಪುರಸ್ಕಾರಾರ್ಹವಾಗಿರುವುದಿಲ್ಲ. |

ಉಲ್ಲೇಖ (3)ರಲ್ಲಿ ಪ್ರಕಟಿಸಿದ ದಿನಾಂಕ:01-01-2020 ರಿಂದ 09-12-2021ರವರೆಗೆ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ (Manager)' ವೃಂದದ ರಾಜ್ಯಮಟ್ಟದ ಕರಡು ಜೇಷ್ಠತಾ ಪಟ್ಟಿಗೆ ಸ್ವೀಕರಿಸಿದ ಆಕ್ಷೇಪಣೆಯನ್ನು ಈ ಮೇಲಿನಂತೆ ಪರಿಗಣಿಸಿ, ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ದಿನಾಂಕ:01-01-2020ರಿಂದ 09-12-2021ರವರೆಗಿನ ಅವಧಿಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ

I/414656/2023

(Manager)' ವೃಂದದ ರಾಜ್ಯ ಮಟ್ಟದ ಅಂತಿಮ ಜ್ಯೇಷ್ಠತ ಪಟ್ಟಿ (Final Seniority List)ಯನ್ನು ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧಗಳಲ್ಲಿ** ಈ ಮೂಲಕ ಪ್ರಕಟಿಸಲಾಗಿದೆ.

Signed by Raj Kishore Singh, Ifs
Date: 06-04-2023 15:31:31

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ, ಮುಖ್ಯಸ್ಥರು)

**ಪ್ರತಿ ಮಾಹಿತಿ / ಹಾಗೂ ಮುಂದಿನ ಕ್ರಮಕ್ಕಾಗಿ:**

1. ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
2. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು- **ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.**
4. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
6. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
7. ಎಲ್ಲಾ ವ್ಯವಸ್ಥಾಪಕ (Manager) ವೃಂದದ ಸಿಬ್ಬಂದಿಗಳಿಗೆ – **ಇಲಾಖಾ ವೆಬ್ಸೈಟ್ ನಲ್ಲಿ ಈ ಪ್ರಕಟಣೆ ಮೂಲಕ.**

I/414658/2023

# ಅನುಬಂಧ -1
## ಭಾಗ-1

## ಹುದ್ದೆಗಳ ವಾಸ್ತವಿಕ ಮಾಹಿತಿ

## ದಿನಾಂಕ: 01.01.2020 ರಿಂದ 09.12.2021 ರವರೆಗಿನ ಕಲ್ಯಾಣ -ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ (Manager)' ವೃಂದದ ರಾಜ್ಯ ಮಟ್ಟದ ಅಂತಿಮ ಜ್ಯೇಷ್ಠತ ಪಟ್ಟಿ (Final seniority List)

| ಕ್ರ. ಸಂ | ವೃಂದದ ಹೆಸರು | ಬ್ಲಾಕ್ ಅವಧಿ | | ಬ್ಲಾಕ್ ಅವಧಿಯಲ್ಲಿ ಉದ್ಭವವಾದ ರಿಕ್ತಸ್ಥಾನಗಳು | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿಮಾಡಲಾದ ಹುದ್ದೆಗಳ ಸಂಖ್ಯೆ | | ಹುದ್ದೆಗಳ ಅನುಪಾತ (Quota) ಮತ್ತು ಭರ್ತಿ ಮಾಡಲಾದ ಹುದ್ದೆಗಳ ನಡುವಿನ ಸಂಖ್ಯಾ ವ್ಯತ್ಯಾಸ | | | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | **ಷರಾ** |
|---|---|---|---|---|---|---|---|---|---|---|---|---|---|---|---|
| | | ಇಂದ | ವರೆಗೆ | | | | | | ಹೆಚ್ಚುವರಿ | | ಕೊರತೆ | | | | |
| | | | | | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | |
| **1** | **2** | **2A** | **2B** | **2C** | **3** | **4** | **5** | **6** | **7** | **8** | **9** | **10** | **11** | **12** | **13** |
| 1 | ವ್ಯವಸ್ಥಾಪಕರು (Manager) | 01.01.2020 | 09.12.2021 | 01 | - | 1 | - | 04 | - | 03 | - | 0 | - | 0 | ದಿನಾಂಕ:01-01-2020ರ ಹಿಂದಿನ ಅವಧಿಯಲ್ಲಿ 03 ವ್ಯವಸ್ಥಾಪಕರು ವಯೋನಿವೃತ್ತಿ/ಬಡ್ತಿ ಹೊಂದಿದ್ದು ಆ ಕಾರಣಕ್ಕಾಗಿ ಉದ್ಭವವಾದ ರಿಕ್ತಸ್ಥಾನಗಳನ್ನು ಈ ಬ್ಲಾಕ್ ಅವಧಿಯಲ್ಲಿ ಬಡ್ತಿ ಮೂಲಕ ಭರ್ತಿ ಮಾಡಲಾಗಿದೆ. |

**ದಿನಾಂಕ:**06.04.2023
**ಸ್ಥಳ:** ಬೆಂಗಳೂರು

**Signed by Raj Kishore Singh, Ifs**
**Date: 06-04-2023 15:31:54**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

I/414660/2023

**ಅನುಬಂಧ-2**

**ನೇರ ನೇಮಕಾತಿ ಅಥವಾ ಮುಂಬಡ್ತಿ ಮುಖಾಂತರ ಒಂದೇ ವಿಧಾನದಿಂದ ನೇಮಕಾತಿ ಮಾಡುವ ವೃಂದಗಳಿಗೆ ದಿನಾಂಕ:01-01-2020 ರಿಂದ 09-12-2021 ರವರೆಗೆ ಕಲ್ಯಾಣ- ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ (Manager)' ವೃಂದದ ರಾಜ್ಯ ಮಟ್ಟದ ಅಂತಿಮ ಜ್ಯೇಷ್ಠತ ಪಟ್ಟಿ (Final seniority List).**

1. **ಇಲಾಖೆ:** ಕರ್ನಾಟಕ ಅರಣ್ಯ ಇಲಾಖೆ
2. **ವೃಂದದ ಹೆಸರು:** ವ್ಯವಸ್ಥಾಪಕ (Manager)
3. **ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ(Local Cadre)-HK ದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ:** 7
4. **ನೇಮಕಾತಿ ನಿಯಮಗಳ ಅನುಸಾರ ನೇಮಕಾತಿ ವಿಧಾನ:** ಮುಂಬಡ್ತಿ

ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: KFD/HOFF/A2(EST)/40/2021, ದಿನಾಂಕ: 21.06.2021ರಲ್ಲಿ ದಿನಾಂಕ: 27-04-1978 ರಿಂದ 09-12-2019 ರವರೆಗೆ ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ **ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ (Manager)'** ವೃಂದದ ರಾಜ್ಯ ಮಟ್ಟದ ಜ್ಯೇಷ್ಠತಾ ಪಟ್ಟಿಯನ್ನು (ಜ್ಯೇಷ್ಠತಾ ಕ್ರಮ ಸಂಖ್ಯೆ 1 ರಿಂದ 8ರವರೆಗೆ) ಈಗಾಗಲೇ ಅಂತಿಮವಾಗಿ ಪ್ರಕಟಿಸಲಾಗಿರುತ್ತದೆ. ತದನಂತರ, ಈ ಕಚೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:KFD/HOFF/A2(EST)/40/2021, ದಿನಾಂಕ:27.06.2022ರನ್ವಯ ಜ್ಯೇಷ್ಠತಾ ಪಟ್ಟಿಯಲ್ಲಿ ಜ್ಯೇಷ್ಠತಾ ಕ್ರಮ ಸಂಖ್ಯೆ: 6A ಅನ್ನು ಸೇರ್ಪಡೆ ಮಾಡಲಾಗಿರುತ್ತದೆ.

**ದಿನಾಂಕ: 01.01.2020 ರಿಂದ 09.12.2021 ರವರೆಗಿನ ಕಲ್ಯಾಣ- ಕರ್ನಾಟಕ ಸ್ಥಳೀಯ ವೃಂದದ (Local Cadre)-HK 'ವ್ಯವಸ್ಥಾಪಕ (Manager)' ವೃಂದದ ರಾಜ್ಯ ಮಟ್ಟದ ಅಂತಿಮ ಜ್ಯೇಷ್ಠತ ಪಟ್ಟಿ (Final Seniority List).**

| ಕ್ರ. ಸಂ | ಜ್ಯೇಷ್ಠತ ಕ್ರ. ಸಂ. | ಹೆಸರು (ಶ್ರೀಯುತರು) | ಮೀಸಲಾತಿ ವರ್ಗ | ನೇರ / ಬಡ್ತಿ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ (ಕಾರ್ಯವರದಿ ದಿನಾಂಕ) | ಅರ್ಹತಾ ದಿನಾಂಕ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | 9 | ಸುರೇಂದ್ರ ಸ್ವಾಮಿ | ಸಾಮಾನ್ಯ | ಬಡ್ತಿ | 06.07.1981 | 28.10.2005 | 31-07-2021 | 31-07-2021 |
| 2 | 10 | ಶಂಶುನ್ನೀಸಾ | ಸಾಮಾನ್ಯ | ಬಡ್ತಿ | 02.06.1982 | 30.01.2006 | 23-07-2021 | 23-07-2021 |
| 3 | 11 | ವೆಂಕಟೇಶ ಹೆಚ್. ಕಟ್ಟಿ | ಸಾಮಾನ್ಯ | ಬಡ್ತಿ | 12.05.1969 | 19.06.2006 | 28-07-2021 | 28-07-2021 |
| 4 | 12 | ಕುಮಾರ ಸ್ವಾಮಿ ಆರ್. ಬಿ. | ಪರಿಶಿಷ್ಟ ಪಂಗಡ | ಬಡ್ತಿ | 23.06.1970 | 31.07.2007 | 16-08-2021 | 16-08-2021 |

ದಿನಾಂಕ: 06.04.2023
ಸ್ಥಳ: ಬೆಂಗಳೂರು

Signed by Raj Kishore Singh, Ifs
Date: 06-04-2023 15:32:17

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)